# ಶ್ರೀಮತ್ ಸ್ವಾಮಿ ಪುರುಷೋತ್ತಮಾನಂದಜಿ ಮಹಾರಾಜ್, ಒಂದು ಶ್ರದ್ಧಾಂಜಲಿ



'ವಿವೇಕಪ್ರಭ'' ಮಾಸಪತ್ರಿಕೆಯ ಸಂಪಾದಕ ಸಲಹಾ ಮಂಡಲಿಯ ಹಿರಿಯ ಸದಸ್ಯರಾಗಿದ್ದ ಶ್ರೀಮತ್ ಸ್ವಾಮಿ ಪುರುಷೋತ್ತಮಾನಂದಜಿ ಮಹಾರಾಜರು ಫೆಬ್ರವರಿ ೨೫ರಂದು ಬ್ರಹ್ಮಲೀನರಾದರು ಎಂದು ತಿಳಿಸಲು ವಿಷಾದಿಸುತ್ತೇವೆ. ಪರಮಪೂಜ್ಯ ಶ್ರೀಮತ್ ಸ್ವಾಮಿ ಯತೀಶ್ವರಾನಂದಜಿ ಅವರ ಸಮಯದಲ್ಲಿ ೧೯೬೦ರಲ್ಲಿ ಬೆಂಗಳೂರಿನ ಶ್ರೀರಾಮಕೃಷ್ಣ ಮಠವನ್ನು ಸೇರಿದ ಸ್ವಾಮೀಜಿ ೧೯೯೩ರವರೆಗೆ ಅಲ್ಲಿನ ವಿವಿಧ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ವಿವೇಕಾನಂದ ಬಾಲಕ ಸಂಘ ಮತ್ತು ವಿವೇಕಾನಂದ ಯುವಕ ಸಂಘಗಳ ಸ್ಫೂರ್ತಿಯ ಸೆಲೆಯಾಗಿದ್ದುದಲ್ಲದೆ ಆಶ್ರಮದ ಭಜನೆಗಳನ್ನು ಜನಪ್ರಿಯಗೊಳಿಸಿದ ಕೀರ್ತಿ ಅವರದು. ನಗರದ ವಿವಿಧೆಡೆ ಪ್ರಾರಂಭವಾದ ಸತ್ಸಂಗ ಕೇಂದ್ರಗಳನ್ನು ನಿಭಾಯಿಸುತ್ತಿದ್ದರು. ೧೯೯೩ರಲ್ಲಿ ಕೊಡಗಿನ ಪೊನ್ನಂಪೇಟೆಯ ಕೇಂದ್ರದ ಅಧ್ಯಕ್ಷರಾಗಿ ನೇಮಿಸಲ್ಪಟ್ಟು ಆಸ್ಪತ್ರೆಯನ್ನು ಹಾಗೂ ಆಶ್ರಮವನ್ನು ಪುನರುಜ್ಜೀವನಗೊಳಿಸಿದರು. ೨೦೦೦ವಲ್ಲಿ ಬೆಳಗಾವಿಯ ಕೇಂದ್ರವು ಸಂಘಕ್ಕೆ ಸೇರ್ಪಡೆಯಾದಾಗ ಅದರ ಕಾರ್ಯದರ್ಶಿಯಾಗಿ ನೇಮಿಸಲ್ಪಟ್ಟು ವಿಶಾಲವಾದ ದೇವಸ್ಥಾನವನ್ನು ನಿರ್ಮಿಸಿ ಉತ್ತರ ಕರ್ನಾಟಕದಲ್ಲಿ ರಾಮಕೃಷ್ಣ-ವಿವೇಕಾನಂದ ಭಾವಧಾರೆಗೆ ಭದ್ರಬುನಾದಿಯನ್ನು ಕಲ್ಪಿಸಿದರು.

'ವಿವೇಕಪ್ರಭ'ವು ೨೦೦೦ದಲ್ಲಿ ಪ್ರಾರಂಭವಾದಾಗಿನಿಂದ ಪತ್ರಿಕೆಯಲ್ಲಿ ಆಸಕ್ತಿ ವಹಿಸಿ ಹೆಚ್ಚು ಜನರಿಗೆ ಅದು ತಲುಪುವಂತೆ ಮಾಡಲು ಬಹಳ ಶ್ರಮ ವಹಿಸಿದರು. ಸಾವಿರಾರು ಜನ ಅವರ ಪ್ರೇರಣೆಯಿಂದ ಚಂದಾದಾರರಾಗಿದ್ದಾರೆ. ಅವರಿಗೆ ನಮ್ಮ ಪತ್ರಿಕೆಯ ಸಂಪಾದಕ ಮಂಡಲಿಯ ಹಾಗೂ ಎಲ್ಲ ಸಿಬ್ಬಂದಿ ವರ್ಗದ ಭಕ್ತಿಪೂರ್ಣ ಶ್ರದ್ಧಾಂಜಲಿ.

ಕರ್ನಾಟಕದ ರಾಮಕೃಷ್ಣ-ವಿವೇಕಾನಂದ ಭಾವವಲಯದಲ್ಲಿ ಸ್ವಾಮಿ ಪುರುಷೋತ್ತಮಾನಂದಜಿ ಮಹಾರಾಜ್ ಒಂದು ವಿಶಿಷ್ಟವಾದ ಛಾಪನ್ನು ಮೂಡಿಸಿದವರು. ಗಾಯಕರಾಗಿ, ಲೇಖಕರಾಗಿ, ಉಪನ್ಯಾಸಕರಾಗಿ, ಆಡಳಿತಗಾರರಾಗಿ, ಸಂಘಟಕರಾಗಿ, ಜೊತೆಗೆ ಮಾನವೀಯ ಸಂವೇದನೆಗಳ ಶ್ರೇಷ್ಠ ವ್ಯಕ್ತಿಯಾಗಿ ಅವರು ಜನಮಾನಸದಲ್ಲಿ ನೆಲೆಗೊಂಡಿದ್ದಾರೆ. ಅವರ ವ್ಯಕ್ತಿತ್ವಕ್ಕೆ ಈ ಬಗೆಯ ಹಲವು ಮುಖಗಳಿದ್ದರೂ ಅದರ ಕೇಂದ್ರಬಿಂದು ಮಾತ್ರ ಆಧ್ಯಾತ್ಮಿಕತೆಯೆ. ಇದರ ನಿರ್ಮಾಣದಲ್ಲಿ ಒಂದು ಕಡೆ ದಿವ್ಯತ್ರಯರ ಜೀವನ-ಸಂದೇಶಗಳಿದ್ದರೆ, ಇನ್ನೊಂದು ಕಡೆ ಅವರ ಗುರುಗಳಾದ ಪೂಜ್ಯ ಸ್ವಾಮಿ ಯತೀಶ್ವರಾನಂದಜಿ ಅವರ ಪ್ರಭಾವಶಾಲಿ ವ್ಯಕ್ತಿತ್ವ, ಮಾರ್ಗದರ್ಶನಗಳಿವೆ. ವ್ಯವಹಾರವನ್ನು ಪರಮಾರ್ಥದ ಎತ್ತರಕ್ಕೆ ಎತ್ತಬಲ್ಲ ಸ್ವಾಮಿ ಯತೀಶ್ವರಾನಂದಜಿ ಅವರ ಪವಿತ್ರ ದೃಷ್ಟಿಯನ್ನು ಅವರು ಮತ್ತೆ ಮತ್ತೆ ಮೆಲುಕು ಹಾಕುತ್ತಿದ್ದರು. ಇದನ್ನು ತಮ್ಮ ಬರಹಗಳಲ್ಲಿ ಒಂದೆರಡು ಕಡೆ ಅವರು ಸ್ಮರಿಸಿರುವುದೂ ಉಂಟು.

ಕನ್ನಡದ ರಾಮಕೃಷ್ಣ-ವಿವೇಕಾನಂದ ಸಾಹಿತ್ಯಕ್ಷೇತ್ರಕ್ಕೆ ಪೂಜ್ಯ ಸ್ವಾಮೀಜಿ ಅವರ ಕೊಡುಗೆ ವಿಶಿಷ್ಟವಾಗಲು ಹಲವು ಕಾರಣಗಳಿವೆ. ಅವುಗಳಲ್ಲಿ ಮೊದಲನೆಯದೆಂದರೆ ಈ ಕಾಲದ ಓದುಗರನ್ನು ನೇರವಾಗಿ ತಟ್ಟಬಲ್ಲ, ಅದ್ಯತನಗೊಳಿಸಿಕೊಂಡ ಭಾಷಾಶೈಲಿ. ಧರ್ಮ-ಅಧ್ಯಾತ್ಮಗಳ ಭಾಷಾಪ್ರಯೋಗಗಳು ಹಳೆಯ ಜಾಡಿಗೆ ಸೇರಿದವುಗಳಾಗಿಬಿಟ್ಟರೆ ಆ ಮೂಲಕ ವಸ್ತುವೂ ಅಪ್ರಸ್ತುತವಾಗಿಬಿಡುತ್ತದೆ ಎಂಬ ಎಚ್ಚರವನ್ನು ಅವರಲ್ಲಿ ವಿಶೇಷವಾಗಿ ಗುರುತಿಸಬಹುದಾಗಿತ್ತು. ಬರೆಯುವಾಗಲೂ ಜನರನ್ನು—ಮಾನಸಿಕವಾಗಿ—ಎದುರಿಗಿಟ್ಟುಕೊಂಡೇ ಬರೆಯುವ ಕ್ರಮ ಅವರದು. ಸ್ಪಷ್ಟಪಡಿಸಬೇಕು, ವಿವರಿಸಬೇಕು ಎಂಬ ಕಾಳಜಿಯನ್ನು ಅವರ ಬರವಣಿಗೆಯುದ್ದಕ್ಕೂ ಗುರುತಿಸಬಹುದು. ಹೀಗಾಗಿಯೇ ಅವರು ಜೀವನಚರಿತ್ರೆಗಳನ್ನು ಬರೆಯುವಾಗಲೂ ಘಟನೆಗಳನ್ನು ಕಾಲಾನುಕ್ರಮಣಿಕೆಯಲ್ಲಿ ನಿರೂಪಿಸುವುದರಲ್ಲೇ ತೃಪ್ತರಾಗುವುದಿಲ್ಲ. ಆ ಘಟನೆಯ ಮಹತ್ತ್ವವನ್ನು, ಅದು ನಮ್ಮ ಬದುಕಿಗೆ ಹೇಗೆ ಪಾಠವಾಗಬಹುದೆಂಬುದನ್ನು ವಿವರಿಸುವುದರ ಕಡೆಗೂ ಹೆಚ್ಚು ಗಮನ ಹರಿಸುತ್ತಾರೆ. ಇದು ಒಂದು ರೀತಿಯಲ್ಲಿ ಅವರ ಉಪನ್ಯಾಸಗಳ ಧಾಟಿಯೂ ಆಗಿತ್ತು. ಸಮೂಹವನ್ನು ಉದ್ದೇಶಿಸಿ ಮಾತನಾಡುವ ಕ್ರಮಕ್ಕಿಂತ ವ್ಯಕ್ತಿಗೆ ಮುಖಾಮುಖಿಯಾಗಿ ಅವನ ಮನಸ್ಸನ್ನು ತಟ್ಟುವ ಹಂಬಲವನ್ನು ಅವರ ಮಾತಿನ ಧಾಟಿಯಲ್ಲಿ ವಿಶೇಷವಾಗಿ ಗುರುತಿಸಬಹುದಿತ್ತು.

ಹಾಗೆ ನೋಡಿದರೆ, ಜನರನ್ನು ತಲುಪಬೇಕೆಂಬ ಕಾಳಜಿ ಅವರ ವ್ಯಕ್ತಿತ್ವದ ಮುಖ್ಯವಾದ ಲಕ್ಷಣವೆಂದು ಹೇಳಬೇಕು. ಹಾಡು-ಮಾತು-ಬರವಣಿಗೆಗಳ ಮೂಲಕ, ಸಂಭಾಷಣೆಗಳ ಮೂಲಕ, ಪ್ರವಾಸಗಳ ಮೂಲಕ, ಅಷ್ಟೇಕೆ ಕಟ್ಟಡ ನಿರ್ಮಾಣದ ಮೂಲಕವೂ, ಇದನ್ನು ಅವರು ದೊಡ್ಡ ಪ್ರಮಾಣದಲ್ಲಿಯೇ ಮಾಡಿದರು. ಅಲ್ಲದೆ ಈ ಕಾಳಜಿಯಿಂದಾಗಿಯೇ ಅವರು ಸಾಧಕರಿಗಾಗಿ ಬರೆದರು, ವಿದ್ಯಾರ್ಥಿಗಳಿಗಾಗಿ ಬರೆದರು, ತ್ಯಾಗಿಗಳಿಗಾಗಿ ಬರೆದರು, ಗೃಹಸ್ಥರಿಗಾಗಿ ಬರೆದರು. ಅವರ ಬರವಣಿಗೆಗಳ ವಸ್ತುವೈವಿಧ್ಯವನ್ನು ಈ ಹಿನ್ನೆಲೆಯಲ್ಲಿ ನಾವು ಗುರುತಿಸಬಹುದಾಗಿದೆ. ಜೊತೆಗೆ ರೂಪವೈವಿಧ್ಯವೂ ಕಡಿಮೆಯೇನಲ್ಲ. ಜೀವನಚರಿತ್ರೆಗಳ ಜೊತೆಗೆ ಲೇಖನಗಳು, ನೀತಿಕಥೆಗಳು, ಪದ್ಯಗಳು, ನಿಘಂಟು, ಸ್ತೋತ್ರಗಳು ಮತ್ತು ಹರಳುಗಟ್ಟಿದ ಚಿಂತನೆಯ ಮಾಲೆಗಳು. ಅಲ್ಲದೆ ಬರೆದುದನ್ನೂ ಆಗಾಗ ಬರೆಯಲಿಲ್ಲ; ಅಕ್ಷರಶಃ ಹಗಲೂ ರಾತ್ರಿ ಬರೆದರು; ಇನ್ನೂ ಬರೆಯುತ್ತಲೇ ಇದ್ದರು.

ಆ ದನಿ, ಲೇಖನಿ ಬೇಗ ಮಾಸಲಾರದು. ಅದಕ್ಕೆ ನಮ್ಮ ಭಾವಪೂರ್ಣ ನಮನ.